ಸಬ್‌ಮಿಷನ್ ಯೋಜನೆಯಡಿ ಕುಡಿಯುವ ನೀರು ಸರಬರಾಜು ವ್ಯವಸ್ಥೆ

857 (914) ಶ್ರೀ ಕುಮಾರಸ್ವಾಮಿ ಕೆ.ಜಿ. (ಶಿವಮೊಗ್ಗ ಗ್ರಾಮಾಂತರ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಶಿವಮೊಗ್ಗ ಗ್ರಾಮಾಂತರ ಕ್ಷೇತ್ರದಲ್ಲಿ ಭದ್ರಾವತಿಯಿಂದ ಸೈದರಕಲ್ಲಹಳ್ಳಿವರೆಗೆ ಭದ್ರಾ ನದಿ ಕಲುಷಿತಗೊಂಡಿದ್ದು ಹಾಗೂ ಕುಂಸಿ, ಹಾರನಹಳ್ಳಿ ಹೋಬಳಿಗಳಲ್ಲಿ ಬಹಳಷ್ಟು ಕಡೆ ಕೊಳವೆ ಬಾವಿ ನೀರು ಕುಡಿಯಲು ಉಪಯೋಗವಿಲ್ಲವೆಂಬ ಅಂಶಗಳು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಪ್ರದೇಶಗಳಲ್ಲಿ ರಾಜೀವ್‌ಗಾಂಧಿ ರಾಷ್ಟ್ರೀಯ ಕುಡಿಯುವ ನೀರು ಸರಬರಾಜು ಯೋಜನೆಯಡಿ ಸುರಕ್ಷಿತ ಕುಡಿಯುವ ನೀರು ಯೋಜನೆಗಾಗಿ ಸರ್ಕಾರಕ್ಕೆ ಬಂದಿರುವ ಪ್ರಸ್ತಾವನೆಗಳೆಷ್ಟು; ಈ ಪೈಕಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿ ಅನುಮೋದನೆ ಪಡೆದ ಯೋಜನೆಗಳೆಷ್ಟು (2007–08, 2008–09 ಮತ್ತು 2009–10ರ ಅವಧಿಯಲ್ಲಿ ಪ್ರತಿ ಯೋಜನೆಯ ಅಂದಾಜು ವೆಚ್ಚ ಸಹಿತ ಪೂರ್ತಿ ವಿವರ ಒದಗಿಸುವುದು);

ಇ) ಜನವರಿ 2011ರ ಅಂತ್ಯದವರೆಗೆ ಈ ಯೋಜನೆಗಳ ಪೈಕಿ ಅನುಷ್ಠಾನಗೊಳ್ಳುತ್ತಿರುವ ಯೋಜನೆಗಳ ಪ್ರಗತಿ ವಿವರ ನೀಡುವುದು?

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಸಚಿವರು):

ಅ) ಬಂದಿದೆ: ಈ ನದಿ ಪಾತ್ರದಲ್ಲಿ ಬರುವ ಜನವಸತಿಗಳಿಗೆ ನದಿ ನೀರನ್ನು ಸರಬರಾಜು ಮಾಡುತ್ತಿಲ್ಲ. ಕೊಳವೆ ಬಾವಿಯಿಂದ ಶುದ್ಧ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿದೆ. ಕುಂಸಿ ಮತ್ತು ಹಾರನಹಳ್ಳಿ ಹೋಬಳಿಗಳಲ್ಲಿನ ಒಟ್ಟು 351 ಜಲಮೂಲಗಳನ್ನು ಈಗಾಗಲೇ ಜಿಲ್ಲಾ ಪ್ರಯೋಗಾಲಯದಲ್ಲಿ ಪರೀಕ್ಷಿಸಿದ್ದು, ಅದರಲ್ಲಿ 55 ಜಲಮೂಲಗಳು ಕಲುಷತೆಯನ್ನು ಹೊಂದಿರುವುದು ಕಂಡುಬಂದಿದೆ. ಕುಡಿಯಲು ಯೋಗ್ಯವಾಗಿಲ್ಲದ ಈ 55 ಜಲಮೂಲಗಳನ್ನು ಶುದ್ದೀಕರಿಸಿ ಶುದ್ಧ

ಕುಡಿಯುವ ನೀರು ಒದಗಿಸಲು ಅಗತ್ಯ ಯೋಜನೆಗಳನ್ನು ಅವಳಡಿಸಿಕೊಳ್ಳಲಾಗುವುದು.

ಆ) ಶಿವಮೊಗ್ಗ ಗ್ರಾಮಾಂತರ ಕ್ಷೇತ್ರದ ಕೂಡ್ಲಿಗೆರೆ ಮತ್ತು ಇತರೆ 18 ಗ್ರಾಮಗಳ ರೂ. 840 ಲಕ್ಷ ಅಂದಾಜಿನ ನೀರು ಸರಬರಾಜು ಯೋಜನೆಗೆ ದಿನಾಂಕ: 19–10–2011 ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. 2008–09 ಮತ್ತು 2009–10ನೇ ಸಾಲಿನಲ್ಲಿ ಯಾವುದೇ ಯೋಜನೆ ಅನುಮೋದನೆಯಾಗಿರುವುದಿಲ್ಲ.

ಇ) ಈ ಕ್ಷೇತ್ರದಲ್ಲಿ ಕೂಡ್ಲಿಗೆರೆ ಮತ್ತು ಇತರೆ 18 ಗ್ರಾಮಗಳಿಗೆ ನೀರು ಸರಬರಾಜು ಯೋಜನೆಗೆ ಕಾಮಗಾರಿಯ ವಿವರಣಾತ್ಮಕ ಅಂದಾಜು ಪಟ್ಟಿ ತಯಾರಿಕೆಯು ಪ್ರಗತಿಯಲ್ಲಿರುತ್ತದೆ. ತಾಂತ್ರಿಕ ಮಂಜೂರಾತಿ ನೀಡಿದ ನಂತರ, ಟಂಡರ್ ಆಧಾರದ ಮೇಲೆ ಕೂಡಲೇ ಯೋಜನೆ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ರಾಯಚೂರು ಜಿಲ್ಲೆಯಲ್ಲಿ ಗ್ರಂಥಾಲಯ ಕೊರತೆ

861 (453) ಶ್ರೀ ನಾಡಗೌಡ ವೆಂಕಟರಾವ್ (ಸಿಂಧನೂರು): ಮಾನ್ಯ ಲೋಕಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಹಾಗೂ ಲಾಟರಿ ಮತ್ತು ಪಶುಸಂಗೋಪನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಯಚೂರು ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರಂಥಾಲಯಗಳ ಸಂಖ್ಯೆ ಎಷ್ಟು (ತಾಲ್ಲೂಕುವಾರು ವಿವರಗಳನ್ನು ನೀಡುವುದು);

ಆ) ಸಿಂಧನೂರು ತಾಲ್ಲೂಕಿನ ಗ್ರಂಥಾಲಯಗಳ ಕೊರತೆ ಇರುವುದು ಸರ್ಕಾರಕ ಗಮನಕ್ಕೆ ಬಂದಿದೆಯೇ;

ಇ) ಹೊಸ ಗ್ರಂಥಾಲಯಗಳನ್ನು ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;